**International Journal of Advance and Applied Research**

www.ijaar.co.in

**ISSN – 2347-7075** **Impact Factor – 8.141**

**Peer Reviewed** **Bi-Monthly**

**Vol. 12 No.1** **Sept-Oct 2024**

# ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಆಸಾಂಸ್ಥಿಕ ವ್ಯವಸ್ಥೆಗಳು

ಅರುಣಾ .ಬಿ

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ

**Corresponding Author-** ಅರುಣಾ .ಬಿ

**Email:**arunabg9@gmail.com

**DOI-10.5281/zenodo.14203499**

**Abstract:**

ಮಕ್ಕಳ ನ್ಯಾಯಕಾಯ್ದೆ -2015, ತಿದ್ದುಪಡಿ2021 ಮತ್ತು ಮಾದರಿ ನಿಯಮಗಳ 2016 ಮತ್ತು ತಿದ್ದುಪಡಿ 2021 ಅಡಿಯಲ್ಲಿ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳಿಗೆ ಸಾಂಸ್ಥಿಕ ಮತ್ತು ಅಸಾಂಸ್ಥಿಕ ಆರೈಕೆಮಾಡಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಾಂಸ್ಥಿಕ ಆರೈಕೆಗೆ ಸರ್ಕಾರ ಬಾಲಮಂದಿಗಳು ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಆದರೆ ಅಸಾಂಸ್ಥಿಕ ವ್ಯವಸ್ಥೆ ನೀಡಲು ಮಕ್ಕಳಿಗಾಗಿ ಅನೇಕ ಕಾರ್ಯಕ್ರಮಗಳು, ಸಮಾಜಿಕ ಭದ್ರತಾ ಯೋಜನೆಗಳನ್ನು ಮಿಷನ್ ವಾತ್ಸಲ್ಯ ಮೂಲಕ ರೂಪಿಸಲಾಗಿದೆ.2021 -2022 ನೇ ಸಾಲಿನಲ್ಲಿ ಐ,ಸಿ,ಪಿ,ಎಸ್ ಹೆಸರಿನ ಬದಲಾಗಿ ಮಿಷನ್ ವಾತ್ಸಲ್ಯ ಹೆಸರಿನಲ್ಲಿ ಪೋರ್ಟಲ್ ಆರಂಭಿಸಿ ಮಕ್ಕಳಿಗೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ

**Keywords:** ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗಾಗಿಯೇ, ಅಸಾಂಸ್ಥಿಕ ವ್ಯವಸ್ಥೆಗಳಾದ ಪ್ರಯೋಜಕತ್ವ, ಫಾಸ್ಟರ್ ಕೇರ್, ವಿಶೇಷ ಪಾಲನಾ ಯೋಜನೆ, ದತ್ತು ವ್ಯವಸ್ಥೆ ಮತ್ತು ಅನುಪಾಲನಾ ಸೇವೆಗಳನ್ನು ಒದಗಿಸುವ ಮೂಲಕ ಪೋಷಕತ್ವ ವಂಚಿತ ಮಕ್ಕಳನ್ನು ಸಾಮಾಜದ ಮುಖ್ಯವಾಹಿನಿಗೆ ತರಲು ಮಕ್ಕಳ ನ್ಯಾಯಕಾಯ್ದೆ-2015 ಬಹುಮುಖ್ಯವಾದ ಪಾತ್ರವಹಿಸುತ್ತಿದೆ

ಪೀಠಿಕೆ:-

ಮಕ್ಕಳ ನ್ಯಾಯಕಾಯ್ದೆ-೨೦೧೫ ಪರಿಚ್ಛೇದ ೪೪ ರಲ್ಲಿ ತಿಳಿಸಿರುವಂತೆ ಸೂಕ್ತವಾದ ವಿಧಿವಿಧಾನಗಳನ್ನು ಅನುಸರಿಸಿ ಮಕ್ಕಳ ಕಲ್ಯಾಣ ಸಮಿತಿಯ ನಿರ್ದೇಶನದಂತೆ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳನ್ನು ಆ ಉದ್ದೇಶಕ್ಕೆ ಫಾಸ್ಟರ್ ಕೇರನಲ್ಲಿ ಜೈವಿಕ ತಂದೆ ತಾಯಿ ಕುಟುಂಬವಲ್ಲದ ಕುಟುಂಬದಲ್ಲಿ ಮಕ್ಕಳನ್ನು ತಾತ್ಕಾಲಿಕವಾಗಿ ಕೌಟುಂಬಿಕವಾತಾವರಣ ನೀಡುವುದುದಾಗಿದೆ. ಆದೇ ರೀತಿ, ಮಕ್ಕಳ ನ್ಯಾಯಕಾಯ್ದೆಯ ಪರಿಚ್ಛೇದಗಳಾದ ೪೩,೪೪,೪೫, ಮತ್ತು ೫೬ ಗಳನ್ನು ಗಮನಿಸಿದರೆ ಆಸಾಂಸ್ಥಿಕ ವ್ಯವಸ್ಥೆ ಕಲ್ಪಿಸಿ ಮಕ್ಕಳಿಗೆ ಸೌಲಭ್ಯಗಳನ್ನು ನೀಡಿ ಪೋಷಣೆ ಮತ್ತು ರಕ್ಷಣೆ ಮಾಡುವ ವ್ಯವಸ್ಥೆಗಳನ್ನು ಕಾಯಿದೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಕ್ಕಳ ನ್ಯಾಯ ಕಾಯ್ದೆಯಡಿ ಇರುವ ಮಕ್ಕಳ ಪೋಷಣೆ ಮತ್ತು ರಕ್ಷಣೆಯ ಮಾರ್ಗಸೂಚಿಯ ಆಶಯದ ಪ್ರಕಾರ ಒಂದು ಮಗುವನ್ನು ಕುಟುಂಬಕ್ಕೆ ಸೇರಿಸಲು ಎಲ್ಲಾ ಪ್ರಯತ್ನಗಳು ಮೀರಿ ಕೊನೆಯ ಪ್ರಯತ್ನವಾಗಿ ಮಾತ್ರ ಸಾಂಸ್ಥಿಕ ಆರೈಕೆಗೆ ನೀಡಬೇಕು ಎಂಬುದು ಕಾಯಿದೆಯ ಆಶಯ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, ೨೦೧೫ ಮತ್ತು ತಿದ್ದುಪಡೆ ಕಾಯ್ದೆ೨೦೨೧ ಹಾಗೂ ಮಾದರಿ ನಿಯಮ-೨೦೧೬ ಮತ್ತು ತಿದ್ದಪಡಿ-೨೦೨೨ರಲ್ಲಿ ರೂಪಿಸಲಾಗಿರುವ ಮಾದರಿ ನಿಯಮಾವಳಿಗಳು, ದತ್ತು , ಪ್ರಾಯೋಜಕತ್ವ, ಫಾಸ್ಟರ್ ಕೇರ್, ಹಾಗೂ ಅನುಪಾಲನಾ ಸೇವೆಗಾಗಿ ಕುಟುಂಬ ಮತ್ತು ಸಮುದಾಯ ಆಧಾರಿತ ಪರ್ಯಾಯಗಳಲ್ಲಿ ಅನುಪಾಲನ ಮೂಲಕ ಮಕ್ಕಳ ಪುನರ್ವಸತಿ ಹಾಗೂ ಮಕ್ಕಳನ್ನು ಅವರ ಮೂಲ ಕುಟುಂಬಕ್ಕೆ ಪುನರ್ ಸಂಯೋಜನೆಗಾಗಿ ಸಾಂಸ್ಥಿಕೇತರ ಆರೈಕೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಈ ಪ್ರಯತ್ನಗಳು ಸಾಂಸ್ಥಿಕೇತರ ಆರೈಕೆಯ ಈ ಕೆಳಕಂಡ ಮಾದರಿಗಳ ಮೂಲಕ ಮಕ್ಕಳನ್ನು ಆಸಾಂಸ್ಥಿಕ ವ್ಯವಸ್ಥೆಗಳಿಗೆ ಅವಕಾಶ ಕಲ್ಪಿಸಿದೆ.

ಅಸಾಂಸ್ಥಿಕೇತರ ಆರೈಕೆ ಸೇವೆಗಳು

**(Non-Institutional Care Services)**

ಪ್ರಾಯೋಜಕತ್ವ **(Sponsorship):** ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, ೨೦೧೫ರ ಕಲಂ ೨ (೫೮)ರ ಪ್ರಕಾರ, ಪ್ರಾಯೋಜಕತ್ವವನ್ನು ``ಕುಟುಂಬಗಳಿಗೆ, ಮಗುವಿನ ವೈದ್ಯಕೀಯ, ಶೈಕ್ಷಣಿಕ ಹಾಗೂ ಅಭಿವೃದ್ಧಿಯ ಅಗತ್ಯಗಳನ್ನು ಪೂರೈಸಲು ಅಗತ್ಯವಿರುವ ಪೂರಕ ಬೆಂಬಲ, ಹಣಕಾಸು ಅಥವಾ ಇತರೆ ಸಹಕಾರ ಎಂದು ವ್ಯಾಖ್ಯಾನಿಸಲಾಗಿದೆ. ಪ್ರಾಯೋಜಕತ್ವ ಕಾರ್ಯಕ್ರಮದಡಿ, ಅಭಿಯಾನವು, ಮಗುವಿನ ಸಮರ್ಪಕ

ಆರೈಕೆಗಾಗಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಜೈವಿಕ ಕುಟುಂಬಗಳು ಅಥವಾ ವಿಸ್ತೃತ ಕುಟುಂಬಗಳಿಗೆ ಪೂರಕವಾಗಿರುತ್ತದೆ. ಸುಮುದಾಯದಲ್ಲಿ ಸ್ಥಳಾಂತರಗೊಳ್ಳದೆ ತಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿಯೇ ಮಕ್ಕಳು ಬೆಳೆಯಲು ಅವಕಾರ ಪಡೆಯುವುದನ್ನು ಖಾತ್ರಿಪಡಿಸಲು ಇದೊಂದು ಷರತ್ತುಬದ್ಧ ಸಹಾಯವಾಗಿದೆ

ಪ್ರಯೋಜಕತ್ವ ಕಾರ್ಯಕ್ರಮವು ಮಕ್ಕಳನ್ನು ಸಾಂಸ್ಥಿಕ ವ್ಯವಸ್ಥೆಯ ವಾತಾವರಣದಿಂದ ಬೇರ್ಪಡಿಸಿ ಕೌಟುಂಬಿಕ ವಾತಾವರಣದಲ್ಲಿ ಬೆಳಸುವಂತೆ ಪ್ರೋತ್ಸಾಯಿಸುವ ಯೋಜನೆಯಾಗಿದೆ. ಜೈವಿಕ ಸಂಬಂಧಿಗಳೊಂದಿಗೆ ಜೀವಿಸುತ್ತಿರುವ ಸಂಕಷ್ಟದಲ್ಲಿರುವ / ದುರ್ಬಲ ವರ್ಗದ ಮಕ್ಕಳಿಗೆ, ಅವರ ಶಿಕ್ಷಣ, ಪೌಷ್ಟಿಕತೆ ಹಾಗೂ ಆರೋಗ್ಯ ಆಗತ್ಯಗಳಿಗಾಗಿ ಹಣಕಾಸಿನ ಬೆಂಬಲವನ್ನು ವಿಸ್ತರಿಸಲಾಗುತ್ತದೆ. . ಈ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ೨೦೦೬-೦೭ನೇ ಸಾಲಿನಲ್ಲಿ ಅನುಷ್ಠಾನಕ್ಕೆ ತಂದಿತು. ಮಗುವಿಗೆ ಪ್ರತಿ ತಿಂಗಳಿಗೆ ರೂ,೧೦೦೦ ದಂತೆ ಆರ್ಥಿಕ ನೆರವು ನೇರವಾಗಿ ಆರ್.ಟಿ.ಜಿ.ಎಸ್. ಮೂಲಕ ನೀಡಲಾಗುತ್ತಿದೆ. ಮಿಷನ್ ವಾತ್ಸಲ್ಯ ೨೦೨೧-೨೨ ರಿಂದ ಈ ಹಣವನ್ನು ಪ್ರತಿ ತಿಂಗಳಿಗೆ ರೂ, ೪೦೦೦ ಗಳಿಗೆ ಹೆಚ್ಚಿಸಲಾಗಿದೆ. ಈ ಆರ್ಥಿಕ ಸಹಾಯದಿಂದ ಮಕ್ಕಳು ಅವರ ಶಿಕ್ಷಣ, ಪೌಷ್ಟಿಕತೆ, ಆರೋಗ್ಯ, ಚಿಕಿತ್ಸೆ ಬಳಸಿಕೊಳ್ಳುವುದರ ಮೂಲಕ ಮಕ್ಕಳು ಶಿಕ್ಷಣವನ್ನು ಮುಂದುವರಿಸಲು ನೆರವಾಗುವುದು.

**ಕೋಷ್ಟಕ-೧**

| ಅನುಬಂಧ-೪ | | | | | |
|---|---|---|---|---|---|
| ಕಳೆದ ಮೂರು ವರ್ಷಗಳಲ್ಲಿ ಪ್ರಾಯೋಜಕತ್ವ ಕಾರ್ಯಕ್ರಮದ ಯೋಜನಾ ವ್ಯಾಪ್ತಿಗೆ ಒಳಪಟ್ಟ ಫಲನಾನುಭವಿಗಳ ಸಂಖ್ಯೆ | | | | | |
| ಕ್ರ,ಸಂ | ಜಿಲ್ಲೆ | 2021-22 | 2022-23 | 2023-24 | 2024-25 |
| 01 | ಬಾಗಲಕೋಟೆ | 52 | 193 | 188 | 14 |
| 02 | ಬೆಂಗಳೂರು ನಗರ | 53 | 180 | 367 | 165 |
| 03 | ಬೆಂಗಳೂರು ಗ್ರಾಮಾಂತರ | 98 | 161 | 174 | 241 |
| 04 | ಬೆಳಗಾವಿ | 200 | 301 | 605 | 653 |
| 05 | ಬಳ್ಳಾರಿ | 300 | 181 | 323 | 521 |
| 06 | ಬೀದರ್ | 275 | 238 | 297 | 240 |
| 07 | ಬಿಜಾಪುರ | 164 | 248 | 413 | 240 |
| 08 | ಚಾಮರಾಜನಗರ | 220 | 589 | 521 | 358 |
| 09 | ಚಿಕ್ಕಬಳ್ಳಾಪುರ | 123 | 285 | 306 | 137 |
| 10 | ಚಿಕ್ಕಮಂಗಳೂರು | 53 | 20 | 55 | 58 |
| 11 | ಚಿತ್ರದುರ್ಗ | 80 | 140 | 157 | 160 |
| 12 | ದಕ್ಷಿಣ ಕನ್ನಡ | 125 | 271 | 276 | 176 |
| 13 | ದಾವಣಗೆರೆ | 44 | 403 | 214 | 96 |
| 14 | ಧಾರವಾಡ | 102 | 308 | 441 | 453 |
| 15 | ಗದಗ | 100 | 279 | 268 | 292 |
| 16 | ಕಲ್ಬುರ್ಗಿ | 50 | 93 | 138 | 116 |
| 17 | ಹಾಸನ | 88 | 161 | 136 | 151 |
| 18 | ಹಾವೇರಿ | 125 | 408 | 287 | 273 |
| 19 | ಕೊಡಗು | 40 | 92 | 189 | 140 |
| 20 | ಕೋಲಾರ | 102 | 119 | 439 | 430 |
| 21 | ಕೊಪ್ಪಳ | 72 | 189 | 367 | 453 |
| 22 | ಮಂಡ್ಯ | 97 | 219 | 452 | 554 |
| 23 | ಮೈಸೂರು | 21 | 88 | 284 | 329 |

| | | | | | |
|---|---|---|---|---|---|
| 24 | ರಾಯಚೂರು | 281 | 290 | 477 | 158 |
| 25 | ರಾಮನಗರ | 136 | 357 | 154 | 176 |
| 26 | ಶಿವಮೊಗ್ಗ | 160 | 119 | 131 | 100 |
| 27 | ತುಮಕೂರು | 247 | 265 | 273 | 341 |
| 28 | ಉಡುಪಿ | 60 | 403 | 217 | 343 |
| 29 | ಉತ್ತರ ಕನ್ನಡ | 162 | 215 | 200 | 300 |
| 30 | ವಿಜಯನಗರ | 00 | 32 | 205 | 233 |
| 31 | ಯಾದಗಿರಿ | 52 | 129 | 244 | 291 |
| | | 3682 | 6976 | 8798 | 8192 |

**ಮೂಲ : ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ, ಅಕ್ಟೋಬರ್-೨೦೨೪.**

ಕಳೆದ ಮೂರು ವರ್ಷಗಳಲ್ಲಿ ಪ್ರಾಯೋಜಕತ್ವ ಕಾರ್ಯಕ್ರಮದ ಯೋಜನಾ ವ್ಯಾಪ್ತಿಗೆ ಒಳಪಟ್ಟ ಫಲನಾನುಭವಿಗಳ ಸಂಖ್ಯೆ ಈ ಮೇಲಿನಂತಿದೆ.

ವಿಶೇಷ ಪಾಲನಾ ಯೋಜನೆ :

ಯೋಜನೆಯಡಿಯಲ್ಲಿ ಜಿಲ್ಲಾ ಎ,ಆರ್.ಟಿ. ಕೇಂದ್ರಗಳಲ್ಲಿ ನೋಂದಾಯಿತ ಕುಟುಂಬದ ವಿವರಗಳನ್ನು ಪಡೆದು, ಗೃಹ ಅಧ್ಯಯನ ನಡೆಸಿ ಒಪ್ಪಿಗೆ ಪತ್ರ ಪಡೆದು ಹೆಚ್ ಐ ವಿ ಸೋಂಕಿತ / ಬಾಧಿತ ಮಕ್ಕಳಿಗೆ ಆರ್ಥಿಕ ಸಹಾಯವನ್ನು ಪ್ರತಿಮಗುವಿಗೆ ಪ್ರತಿ ಮಾಹೆಗೆ ರೂ ೧೦೦೦ ಗಳಂತೆ (ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ) ಒದಗಿಸಲಾಗುತ್ತದೆ. ಈ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಶೇ ೧೦೦ ರಷ್ಟು ಅನುದಾನದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರದವತಿಯಿಂದ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ. ಹೆಚ್.ಐ.ವಿ. ಅಥವಾ ಏಡ್ಸ್ ಸೋಂಕಿತ ಅಥವಾ ಬಾಧಿತ ಮಕ್ಕಳ ಹಾಗೂ ಏಡ್ಸ್ ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳಿಗೆ ಪೌಷ್ಟಿಕ ಆಹಾರ , ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವುದರೊಂದಿಗೆ ಅವರನ್ನು ಶಿಕ್ಷಣದ ಮುಖ್ಯವಾಹಿನಿಯಲ್ಲಿ ತರುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ವೈದ್ಯಕೀಯ, ಪೌಷ್ಟಿಕ ಆಹಾರ, ಶಿಕ್ಷಣ ಮತ್ತು ಇತರೆ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಳಿಗೆ ಪೂರಕವಾಗಿ ಆರ್ಥಿಕ ನೆರವನ್ನು ಮಗುವಿಗೆ ೧೮ ವರ್ಷ ಪೂರ್ಣಗೊಳ್ಳವವರೆಗೆ ಒದಗಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ವರ್ಷವಾರು ಫಲಾನುಭಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಅದರಿ ಫಲಾನುಭವಿಗಳಿಗೆ ಡಿ.ಬಿ,ಟಿ ಮೂಲಕ ಅನುದಾನ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗಿದೆ.

**ಕೋಷ್ಟಕ-೨**

| ಅನುಬಂಧ-೫ | | | | | |
|---|---|---|---|---|---|
| ಕಳೆದ ಮೂರು ವರ್ಷಗಳಲ್ಲಿ ವಿಶೇಷಪಾಲನಾ ಯೋಜನಾ ವ್ಯಾಪ್ತಿಗೆ ಒಳಪಟ್ಟ ವ್ಯಾಪ್ತಿಗೆ ಒಳಪಟ್ಟ ಫಲನಾನುಭವಿಗಳ ಸಂಖ್ಯೆ | | | | | |
| ಕ್ರ.ಸಂ | ಜಿಲ್ಲೆ | 2021-22 | 2022-23 | 2023-24 | 2024-25 |
| 01 | ಬಾಗಲಕೋಟೆ | 1008 | 678 | 595 | 475 |
| 02 | ಬೆಂಗಳೂರು ಗ್ರಾಮಾಂತರ | 155 | 165 | 197 | 155 |
| 03 | ಬೆಂಗಳೂರು ನಗರ | 291 | 224 | 268 | 240 |
| 04 | ಬೆಳಗಾವಿ | 1399 | 886 | 932 | 785 |
| 05 | ಬಳ್ಳಾರಿ | 1074 | 803 | 456 | 378 |
| 06 | ಬೀದರ್ | 494 | 396 | 397 | 381 |
| 07 | ಬಿಜಾಪುರ | 670 | 454 | 415 | 370 |
| 08 | ಚಾಮರಾಜನಗರ | 309 | 288 | 264 | 261 |

| | | | | | |
|---|---|---|---|---|---|
| 09 | ಚಿಕ್ಕಬಳ್ಳಾಪುರ | 213 | 247 | 291 | 315 |
| 10 | ಚಿಕ್ಕಮಂಗಳೂರು | 323 | 298 | 323 | 342 |
| 11 | ಚಿತ್ರದುರ್ಗ | 381 | 370 | 352 | 365 |
| 12 | ದಾವಣಗೆರೆ | 378 | 369 | 399 | 427 |
| 13 | ಧಾರವಾಡ | 488 | 442 | 481 | 498 |
| 14 | ಗದಗ | 373 | 325 | 333 | 311 |
| 15 | ಕಲ್ಬುರ್ಗಿ | 273 | 269 | 247 | 238 |
| 16 | ಹಾಸನ | 347 | 332 | 404 | 357 |
| 17 | ಹಾವೇರಿ | 722 | 701 | 727 | 663 |
| 18 | ಉತ್ತರಕನ್ನಡ | 235 | 194 | 181 | 175 |
| 19 | ಕೊಡಗು | 169 | 151 | 170 | 150 |
| 20 | ಕೋಲಾರ | 402 | 405 | 382 | 324 |
| 21 | ಕೊಪ್ಪಳ | 1055 | 974 | 952 | 915 |
| 22 | ಮಂಡ್ಯ | 334 | 332 | 383 | 380 |
| 23 | ದಕ್ಷಿಣ ಕನ್ನಡ | 424 | 425 | 447 | 407 |
| 24 | ಮೈಸೂರು | 665 | 707 | 767 | 679 |
| 25 | ರಾಯಚೂರು | 595 | 529 | 465 | 430 |
| 26 | ರಾಮನಗರ | 269 | 284 | 281 | 255 |
| 27 | ಶಿವಮೊಗ್ಗ | 419 | 400 | 391 | 411 |
| 28 | ತುಮಕೂರು | 299 | 279 | 355 | 384 |
| 29 | ಉಡುಪಿ | 389 | 345 | 339 | 290 |
| 30 | ಯಾದಗಿರಿ | 297 | 318 | 264 | 224 |
| 31 | ವಿಜಯನಗರ | 00 | 00 | 277 | 240 |
| | ಒಟ್ಟು | 14450 | 12590 | 12735 | 11825 |

ಮೂಲ : ಮಕ್ಕಳ ರಕ್ಷಣಾ ನರ್ದೇಶನಾಲಯ, ಬೆಂಗಳೂರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ, ಅಕ್ಟೋಬರ್-೨೦೨೪.

ಉಪಕಾರ ಯೋಜನೆ:

ರಾಜ್ಯ ಸರ್ಕಾರದವತಿಯಿಂದ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ. ಸದರಿ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಶೇ ೧೦೦ ರಷ್ಟು ಅನುದಾನದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ಫಲಾನುಭವಿಗಳಿಗೆ ಮಾಹೆಯಾನ ರೂ ೫೦೦೦ ಗಳ ಆರ್ಥಿಕ ಸಹಾಯ ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದಿರುವ ವರ್ಷವಾರು ಫಲಾನುಭಿಗಳ ಮಾಹಿತಿಯನ್ನು ಕೆಳಗಿನ ಅನುಬಂಧÀಲ್ಲಿ ನೀಡಿದೆ. ಅದರಿ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಅನುದಾನ ಬಿಡುಗಡೆಮಾಡಲು ಕ್ರಮಕೈಗೊಳ್ಳಲಾಗಿದೆ. ೨೦೨೦-೨೧ನೇ ಸಾಲಿನ ರಾಜ್ಯ ಸರ್ಕಾರ ಅಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಬಾಲನ್ಯಾಯ ಮಕ್ಕಳ ಪಾಲನೆ ಮತ್ತು ರಕ್ಷಣೆ ಕಾಯ್ದೆ-೨೦೧೫ ರಡಿ ಎಲ್ಲಾ ನೊಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾದ ೧೮ ವರ್ಷ ವಯಸ್ಸಿನ್ನು ಮೀರಿದ ಅರ್ಹ ಮಕ್ಕಳಿಗೆ ಅವರು ಆರ್ಥಿಕವಾಗಿ ಸ್ವಾವಲಂಭಿಗಳಾಗುವವರೆಗೆ ಅಥವಾ ಗರಿಷ್ಟ ೩ ವರ್ಷಗಳ ಅವಧಿಗೆ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವೆರೆಗೆ ಪುನರ್ವಸತಿಗಾಗಿ ಆರ್ಥಿಕ ಸೌಲಭ್ಯ ಒದಗಿಸುವ “ಉಪಕಾರ” ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

ಕೋಷ್ಟಕ-೩

| ಅನುಬಂಧ-೩ | | | | | |
|---|---|---|---|---|---|
| ಕಳೆದ ಮೂರು ವರ್ಷಗಳಲ್ಲಿ ಉಪಕಾರ ಯೋಜನಾ ವ್ಯಾಪ್ತಿಗೆ ಒಳಪಟ್ಟ ವ್ಯಾಪ್ತಿಗೆ ಒಳಪಟ್ಟ ಫಲನಾನುಭವಿಗಳ ಸಂಖ್ಯೆ | | | | | |
| ಕ್ರ.ಸಂ | ಜಿಲ್ಲೆ | 2021-22 | 2022-23 | 2023-24 | 2024-25 |
| 01 | ಬಾಗಲಕೋಟೆ | 5 | 9 | 17 | 18 |
| 02 | ಬೆಂಗಳೂರು ಗ್ರಾಮಾಂತರ | 1 | 1 | 1 | 0 |
| 03 | ಬೆಂಗಳೂರು ನಗರ | 12 | 38 | 87 | 49 |
| 04 | ಬೆಳಗಾವಿ | 14 | 03 | 03 | 12 |
| 05 | ಬಳ್ಳಾರಿ | 5 | 0 | 0 | 1 |
| 06 | ಬೀದರ್ | 4 | 0 | 0 | 0 |
| 07 | ಬಿಜಾಪುರ | 5 | 3 | 6 | 1 |
| 08 | ಚಾಮರಾಜನಗರ | 4 | 0 | 0 | 0 |
| 09 | ಚಿಕ್ಕಬಳ್ಳಾಪುರ | 0 | 0 | 0 | 0 |
| 10 | ಚಿಕ್ಕಮಂಗಳೂರು | 1 | 0 | 0 | 0 |
| 11 | ಚಿತ್ರದುರ್ಗ | 0 | 3 | 2 | 4 |
| 12 | ದಾವಣಗೆರೆ | 9 | 9 | 11 | 13 |
| 13 | ಧಾರವಾಡ | 7 | 12 | 20 | 20 |
| 14 | ಗದಗ | 7 | 9 | 13 | 19 |
| 15 | ಕಲ್ಬುರ್ಗಿ | 7 | 3 | 3 | 2 |
| 16 | ಹಾಸನ | 1 | 2 | 2 | 4 |
| 17 | ಹಾವೇರಿ | 1 | 1 | 2 | 2 |
| 18 | ಉತ್ತರಕನ್ನಡ | 1 | 1 | 1 | 1 |
| 19 | ಕೊಡಗು | 1 | 1 | 1 | 1 |
| 20 | ಕೋಲಾರ | 2 | 10 | 9 | 9 |
| 21 | ಕೊಪ್ಪಳ | 6 | 15 | 15 | 17 |
| 22 | ಮಂಡ್ಯ | 0 | 0 | 1 | 1 |
| 23 | ದಕ್ಷಿಣ ಕನ್ನಡ | 19 | 33 | 40 | 30 |
| 24 | ಮೈಸೂರು | 0 | 4 | 4 | 4 |
| 25 | ರಾಯಚೂರು | 4 | 3 | 1 | 0 |
| 26 | ರಾಮನಗರ | 4 | 1 | 3 | 2 |
| 27 | ಶಿವಮೊಗ್ಗ | 0 | 1 | 1 | 1 |
| 28 | ತುಮಕೂರು | 1 | 3 | 3 | 1 |
| 29 | ಉಡುಪಿ | 0 | 0 | 0 | 0 |
| 30 | ಯಾದಗಿರಿ | 1 | 2 | 2 | 0 |
| 31 | ವಿಜಯನಗರ | 0 | 0 | 0 | 1 |
| | ಒಟ್ಟು | 122 | 167 | 248 | 213 |

ಮೂಲ : ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ, ಅಕ್ಟೋಬರ್-೨೦೨೪.

**ಫಾಸ್ಟರ್ ಕೇರ್ (Foster Care) :** ಮಕ್ಕಳ ನ್ಯಾಯ ಕಾಯ್ದೆ, ೨೦೧೫ ಹಾಗೂ ಪರಿಚ್ಛೇದ ೪೪ ರಂತೆ ನಿಯಮಾವಳಿಗಳಲ್ಲಿ ವಿವರಿಸಿರುವಂತೆ ಫಾಸ್ಟರ್ ಕೇರ್, ಅಂದರೆ ಮಗುವನ್ನು ಒಂದು ಕೌಟುಂಬಿಕ ಪರಿಸರದಲ್ಲಿ ಪರ್ಯಾಯ ಆರೈಕೆಗಾಗಿ ಇರಿಸುವುದು, ಸಾಮಾನ್ಯವಾಗಿ ಅಲ್ಪಾವಧಿಗೆ ಅಥವಾ ವಿಸ್ತೃತ ಅವಧಿಯವರೆಗೆ. ಪೋಷಣೆ ಮತ್ತು ರಕ್ಷಣೆಯ ಉದ್ದೇಶಕ್ಕಾಗಿ ಸಂಬAಧವಿರದ ಕುಟುಂಬದ ಸದಸ್ಯರೊಂದಿಗೆ ಒಂದು ಮಗುವನ್ನು ಫಾಸ್ಟರ್ ಕೇರ್‌ನಲ್ಲಿ ಇರಿಸುವಾಗ, ಒಂದೇ ರೀತಿಯ ಸಂಸ್ಕೃತಿ, ಬುಡಕಟ್ಟು ಅಥವಾ ಸಮುದಾಯ ಸಂಪರ್ಕವನ್ನು ಹೊಂದಿರುವAತಹ ಕುಟುಂಬಗಳಿಗೆ ಆದ್ಯತೆ ನೀಡಬೇಕು. ಫಾಸ್ಟರ್ ಕೇರ್, ಸಮೂಹ ಫಾಸ್ಟರ್ ಮಿಷನ್ ವಾತ್ಸಲ್ಯ ಮಾರ್ಗಸೂಚಿಗಳನ್ನು ಒಳಗೊಂಡಿರಬೇಕು.

ಮಗುವಿನ ಪೋಷಣೆ ಹಾಗೂ ರಕ್ಷಣೆಗಾಗಿ ಸಂಬಂಧವಲ್ಲದ ಕುಟಂಬದವರು ಮಗುವಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು, ಮಗುವಿನ ಪೋಷಣೆಗಾಗಿ ಹಣಕಾಸಿನ ಬೆಂಬಲವನ್ನು ಜೈವಿಕವಾಗಿ ಸಂಬಂಧವಲ್ಲದ ಫಾಸ್ಟರ್ ಪೋಷಕರಿಗೆ ಒದಗಿಸಲಾಗುವುದು. ಗುಂಪು ಫಾಸ್ಟರ್ ಕೇರ್ ನ್ನು, ಪೋಷಕರ ಪೋಷಣೆ ಇಲ್ಲದಿರುವಂತಹ, ಪೋಷಣೆ ಹಾಗೂ ರಕ್ಷಣೆ ಅಗತ್ಯವಿರುವಂತಹ ಮಕ್ಕಳಿಗಾಗಿ ಅರ್ಹ ಕುಟುಂಬ ಸೌಲಭ್ಯದಲ್ಲಿನ, ಕುಟುಂಬದ ರೀತಿಯ ಪೋಷಣೆ ಎಂದು ವ್ಯಾಖ್ಯಾನಿಸಲಾಗಿದೆ. ಅದರ ಪ್ರಕಾರವಾಗಿ ಸಂಬಂಧವಿರದ ಮಕ್ಕಳ ಗುಂಪನ್ನು, ಸ್ವಂತ ಮಕ್ಕಳು ಇರುವ ಅಥವಾ ಇಲ್ಲದಿರುವಂತಹ ಕುಟುಂಬ ರೀತಿಯ ವಾತಾವರಣದಲ್ಲಿ ಫಾಸ್ಟರ್ ಕೇರ್ ಕುಟುಂಬ ಅಥವಾ ಫಾಸ್ಟರ್ ಕೇರ್ ಒದಗಿಸುವವರ ಪೋಷಣೆಗೆ ಒಪ್ಪಿಸಲಾಗುವುದು.

**ದತ್ತು (Adoption)**

ಈ ಹಿನ್ನಲೆಯಲ್ಲಿ ದತ್ತು ಪ್ರಕ್ರಿಯೆ ಅನಾಥ, ಪರಿತಪಿಸಲ್ಪಟ್ಟ ಹಾಗೂ ನಿರ್ಗತಿಕ ಮಕ್ಕಳ ಪುನರ್ವಸತಿಗೆ ನೆರವಾಗುವ ಒಂದು ಸೂಕ್ತ ಕಾರ್ಯಕ್ರಮ. ಇಂತಹ ಮಕ್ಕಳಿಗೆ ಜೈವಿಕ ಪೋಷಕರನ್ನು ಒದಗಿಸುವುದರ ಮೂಲಕ ಶಾಶ್ವತ ಕೌಟುಂಬಿಕ ವ್ಯವಸ್ಥೆಯನ್ನು ಕಾನೂನು ಬದ್ಧವಾಗಿ ಕಲ್ಪಿಸಲು ದತ್ತು ಕಾರ್ಯಕ್ರಮ ತುಂಬಾ ಉಪಯುಕ್ತವಾಗಿದೆ. ಕಾನೂನುಬದ್ದವಾಗಿ ದತ್ತು ಹೋಗಲು ಸಿದ್ಧವಾಗಿರುವ ಮಕ್ಕಳಿಗಾಗಿ ಸೂಕ್ತ ಕುಟುಂಬಗಳನ್ನು ಹುಡುಕುವುದು. ವಿಶೇಷ ದತ್ತು ಕೇಂದ್ರಗಳು (ಎಸ್‌ಎಎ) ದತ್ತು ಕಾರ್ಯಕ್ರಮಕ್ಕೆ ಅನುಕೂಲ ಒದಗಿಸುತ್ತವೆ. ಬಾಲನ್ಯಾಯಕಾಯ್ದೆ ೨೦೧೫ರ ಅಧ್ಯಾಯ ೮ ರಲ್ಲಿ ಪರಿಚ್ಛೇದ ೫೬(೧)ರ ಪ್ರಕಾರ ಯಾವ ಮಕ್ಕಳು ಅನಾಥರೋ ಅಥವಾ ಎಲ್ಲೋ ಬಿಟ್ಟುಹೋಗಲ್ಪಟ್ಟ (ತಿರಸ್ಕರಿಸಿದ) ಅಥವಾ ನಿರ್ದಿಷ್ಟ ಪಡಿಸಿದ ವಿಧಾನದಲ್ಲಿ ಮಕ್ಕಳನ್ನು ಅವರ ತಾಯಿ/ತಂದೆ ಅಥವಾ ಇಬ್ಬರೂ ಸೇರಿ ಪರಿತ್ಯಜಿಸುತ್ತಾರೋ ಅಂತಹ ಮಕ್ಕಳನ್ನು ಈ ಕಾಯ್ದೆಯಡಿ ನಿಯಮಗಳನ್ನು ರೂಪಿಸಲಾಗುತ್ತದೆ. ಪ್ರಾಧಿಕಾರದಿಂದ ನಿಯಂತ್ರಣ ಚೌಕಟ್ಟಿನೊಳಗೆ ಕಾನೂನಿನ ನಿಯಮಗಳಿಗೆ ಬದ್ಧರಾಗಿ ಮಗುವಿನ ಕೌಟುಂಬಿಕ ಹಕ್ಕನ್ನು ಖಾತ್ರಿಗೊಳಿಸಲು ದತ್ತು ಕಾರ್ಯಕ್ರಮವನ್ನು ಬಳಸಬೇಕು. ಇದರ ಮೂಲ ಉದ್ದೇಶ ಮಕ್ಕಳಿಲ್ಲದವರಿಗೆ ಮಕ್ಕಳನ್ನು ನೀಡುವುದಲ್ಲ, ಪೋಷಕತ್ವ ವಂಚಿತ ಮಕ್ಕಳಿಗೆ ತಂದೆ ತಾಯಿಯನ್ನು ಒದಗಿಸುವುದಾಗಿದೆ. ಅಂತಹ ಮಕ್ಕಳಿಗೆ ಶಾಶ್ವತ ಕೌಟುಂಬಿಕ ವಾತಾವರಣ ನಿರ್ಮಿಸುವ ಉದ್ದೇಶವೇ ದತ್ತು ಈ ಕಾರ್ಯಕ್ರಮವಾಗಿದೆ. ಮಕ್ಕಳು ಕುಟುಂಬ ಹೊಂದುವುದು ಪ್ರತಿ ಮಗುವಿನ ಹಕ್ಕಾಗಿದೆ. ಅವರಿಗೆ ಅವಶ್ಯವಿರುವ ಆರೈಕೆ ಮತ್ತು ಪ್ರೀತಿಯನ್ನು ಕುಟುಂಬದ ವಾತಾವರಣವು ಕಲ್ಪಿಸುವುದಾಗಿದೆ.

**ಕೋಷ್ಟಕ -೪**

| ಅನುಬಂಧ-೦೧ | | | | |
|---|---|---|---|---|
| ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಸ್ವದೇಶಿ ಮತ್ತು ವಿದೇಶಿ ದತ್ತು ಮಕ್ಕಳ ಸಂಖ್ಯೆ | | | | |
| ಕ್ರ.ಸಂ | ವರ್ಷ | ಸ್ವದೇಶಿ ದತ್ತು | ವಿದೇಶಿ ದತ್ತು | ಒಟ್ಟು |
| **01** | **2022-23** | **188** | **35** | **223** |
| **02** | **2023-24** | **263** | **21** | **284** |
| **03** | **2024-25** | **139** | **6** | **145** |

ಮೂಲ : ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ, ಅಕ್ಟೋಬರ್-೨೦೨೪.

ಅನುಪಾಲನಾ ಸೇವೆ (After Care):

೧೮ ವರ್ಷಗಳನ್ನು ಪೂರೈಸಿದ ನಂತರ ಮಕ್ಕಳ ಪೋಷಣಾ ಸಂಸ್ಥೆಯಿಂದ ಹೊರಗೆ ಹೋಗುವ ಮಕ್ಕಳಿಗೆ, ಅವರು ಸಮಾಜದ ಮುಖ್ಯವಾಹಿನಿಯೊಂದಿಗೆ ಮರು ಸೇರ್ಪಡೆಗೊಳ್ಳಲು ಅಗತ್ಯವಿರುವ ಹಣಕಾಸಿನ ಬೆಂಬಲವನ್ನು ಒದಗಿಸಬೇಕು. ಪಂಚಾಯತ್ರಾಜ್ ಸಂಸ್ಥೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಬೆಂಬಲದೊಂದಿಗೆ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಕ್ರಮಗಳನ್ನು ಕೈಗೊಳ್ಳುವುದು. ಪ್ರಾಯೋಜಕತ್ವ (ತಡೆಗಟ್ಟುವ ಸಲುವಾಗಿ ಮಾತ್ರ) ಹಾಗೂ ಫಾಸ್ಟರ್ ಕೇರ್ ನಿಧಿ ಪರಿಷ್ಕರಣೆ ಹಾಗೂ ಮಂಜೂರಾತಿಗಾಗಿ ಪ್ರತಿ ಜಿಲ್ಲೆಯಲ್ಲೂ ಪಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ ಇರಬೇಕೆಂಬ ನಿಯಮವಿದೆ.. ಸಾಂಸ್ಥಿಕೇತರ ಪೋಷಣೆಯು ಜೆಜೆ ಕಾಯ್ದೆ ಹಾಗೂ ಆದರಡಿಯ ನಿಯಮಾವಳಿಗಳಿಗೆ ಪೂರಕವಾಗಿರಬೇಕು. ಬೆಂಬಲವನ್ನು ೧೮ ವರ್ಷಗಳಿಂದ ೨೧ ವರ್ಷ ವಯಸ್ಸಿನ ನಡುವಿನ ಮಕ್ಕಳಿಗೆ ನೀಡಬಹುದು, ಅವನ ಅಥವಾ ಅವಳ ಸ್ವಾವಲಂಬಿಯಾಗುವವರೆಗೂ, ಅಂದರೆ ೨೩ ವರ್ಷಗಳು ತುಂಬುವವರೆಗೂ ಈ ಹಣಕಾಸಿನ ಬೆಂಬಲವನ್ನು ಒದಗಿಸಬಹುದು.

ಮಿಷನ್ ವಾತ್ಸಲ್ಯ :- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಕಲ್ಯಾಣವನ್ನು (ಅಭಿವೃದ್ಧಿ) ಖಾತ್ರಿಪಡಿಸುವ ನೋಡಲ್ ಸಚಿವಾಲಯವಾಗಿದೆ. ಇತರೆ ಸಚಿವಾಲಯಗಳು ಹಾಗೂ ಸಂಸ್ಥೆಗಳ ಸಂಯೋಜನೆದೊಂದಿಗೆ ಶಾಸನ (ಕಾನೂನು), ನೀತಿ ಹಾಗೂ ಯೋಜನಾತ್ಮಕ ಮಧ್ಯಸ್ಥಿಕೆಗಳನ್ನು ರೂಪಿಸುವ ಮೂಲಕ ಇದನ್ನು ಸಾಧಿಸುವುದು ಇಲಾಖೆಯ ಆಶಯವಾಗಿರುತ್ತದೆ. ರಾಷ್ಟ್ರೀಯ ಮಕ್ಕಳ ನೀತಿ (೨೦೧೩ ರ ಪರಿಷ್ಕರಣೆಯಂತೆ), ಹಾಗೂ ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆ, ೨೦೧೬ರ ಪ್ರಕಾರ ಮಕ್ಕಳ ಕಲ್ಯಾಣ ಹಾಗೂ ರಕ್ಷಣೆಗೆ ನೀತಿಯ ಚೌಕಟ್ಟನ್ನು ರೂಪಿಸಲಾಯಿತು.

"ಮಿಷನ್ ವಾತ್ಸಲ್ಯ" ಯೋಜನೆಯು ಸುಸ್ಥಿರ ಅಭಿವೃದ್ಧಿಯ ಗುರಿಗಳಿಗೆ (ಎಸ್.ಡಿ.ಜಿ) ಪೂರಕವಾಗಿ ಮಕ್ಕಳ ಅಭಿವೃದ್ಧಿ ಹಾಗೂ ಮಕ್ಕಳ ಸಂರಕ್ಷಣೆಯ ಆದ್ಯತೆಗಳನ್ನು ಸಾಧಿಸುವ ಒಂದು ಮಾರ್ಗಸೂಚಿಯಾಗಿದೆ. ಈ ಯೋಜನೆಯ `ಯಾವುದೇ ಮಗುವನ್ನೂ ಬಿಡಬೇಡಿ (ನಿರ್ಲಕ್ಷಿಸದಿರಿ)' ಎಂಬ ಗುರಿಯೊಂದಿಗೆ ಮಕ್ಕಳ ನ್ಯಾಯ, ಪೋಷಣೆ ಮತ್ತು ರಕ್ಷಣೆ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಮಕ್ಕಳ ಹಕ್ಕುಗಳು, ವಕಾಲತ್ತು ಮತ್ತು ಅರಿವು ಮೂಡಿಸುವ ಚಟುವಟಿಕೆಗಳಿಗೆ ಒತ್ತು ನೀಡುತ್ತದೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, ೨೦೧೫ ಮತ್ತು ಮಾದರಿ ನಿಯಮಗಳು, ಪೋಕ್ಸೋ ( POCSO) ಹಾಗೂ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ, ೨೦೧೨, ಈ ಧ್ಯೇಯದ ಅನುಷ್ಠಾನವು ಪ್ರಾಥಮಿಕ ಚೌಕಟ್ಟುಗಳಾಗಿವೆ. ೨೦೦೯-೧೦ಕ್ಕೂ ಮಂತ್ರಿ ಸಚಿವಾಲಯದಡಿ ಈ ಕೆಳಕಂಡ ಮೂರು ಯೋಜನೆಗಳು ಅನುಷ್ಠಾನದಲ್ಲಿದ್ದವು,

ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಮಕ್ಕಳಿಗೆ ಒದಗಿಸುವ

ಪೋಷಣೆ ಮತ್ತು ರಕ್ಷಣೆ ಕಾರ್ಯಕ್ರಮಗಳು

೧. ಬೀದಿ ಮಕ್ಕಳಿಗಾಗಿ ಸಮಗ್ರ ಕಾರ್ಯಕ್ರಮ

೨. ಶಿಶು ಗೃಹಗಳಿಗೆ ಸಹಾಯ ನೀಡುವ ಯೋಜನೆ

ಈ ಮೂರೂ ಯೋಜನೆಗಳನ್ನು ರಾಷ್ಟ್ರೀಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್-ICPS) ಎಂಬ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಡಿ ಅನುಷ್ಠಾನಗೊಳಿಸಲಾಗಿತ್ತು. ಐಸಿಪಿಎಸ್ ಅನ್ನು ೨೦೦೯-೧೦ರಲ್ಲಿ ಸಚಿವಾಲಯ ಅನುಷ್ಠಾನಗೊಳಿಸಿತ್ತು. ನಂತರದಲ್ಲಿ ಅಂದರೆ ೨೦೧೭ರಲ್ಲಿ ಈ ಯೋಜನೆಯನ್ನು `ಮಕ್ಕಳ ರಕ್ಷಣಾ ಸೇವೆಗಳು' (ಸಿಪಿಎಸ್-ICPS) ಎಂದು ಮರುನಾಮಕರಣಗೊಳಿಸಲಾಯಿತು. ಈ ಐ.ಸಿ.ಪಿ.ಎಸ್, ಯೋಜನೆಯನ್ನು ಪ್ರಸ್ತುತ, ಅಂದರೆ ೨೦೨೧-೨೨ರಿಂದ ಮಿಷನ್ ವಾತ್ಯಲ್ಯ ಯೋಜನೆಯಡಿ ವಿಲೀನಗೊಳಿಸಲಾಗಿದೆ.

**ಕೋಷ್ಟಕ-5**

| | ಅನುಬಂಧ-7 | | | |
|---|---|---|---|---|
| | ಕಳೆದ ಮೂರು ವರ್ಷಗಳಲ್ಲಿ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ವಿವರ | | | |
| ಕ್ರ.ಸಂ | ಕಾರ್ಯಕ್ರಮ | ವರ್ಷವಾರು ಫಲಾನುಭವಿಗಳ ಹಾಗೂ ಅನುದಾನದ ವಿವರ | | |
| | | ಅವಧಿ | ಫಲಾನುಭವಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ |
| 01 | ಪ್ರಾಯೋಜಕತ್ವ ಕಾರ್ಯಕ್ರಮ | 2021-22 | 3682 | 3,09,38000 |
| | | 2022-23 | 6976 | 23,67,36,000 |
| | | 2023-24 | 8798 | 39,69,84,000 |

ಅರುಣಾ .ಬಿ

| | | | | |
|---|---|---|---|---|
| | | 2024-25 | 8192 | 00 |
| 02 | ವಿಶೇಷ ಪಾಲನಾ ಯೋಜನೆ | 2021-22 | 14450 | 13,98,24,000 |
| | | 2022-23 | 12590 | 14,53,94,000 |
| | | 2023-24 | 12735 | 13,96,65,000 |
| | | 2024-25 | 11825 | 00 |
| 03 | ಉಪಕಾರ ಯೋಜನೆ | 2021-22 | 161 | 93,45,000 |
| | | 2022-23 | 169 | 95,65,000 |
| | | 2023-24 | 248 | 1,17,00,000 |
| | | 2024-25 | 213 | 00 |
| 04 | ಮುಖ್ಯಮಂತ್ರಿ ಬಾಲಸೇವಾ ಯೋಜನೆ | 2021-22 | 210 | 44,06,000 |
| | | 2022-23 | 233 | 82,59,000 |
| | | 2023-24 | 172 | 65,52,000 |
| | | 2024-25 | 132 | 00 |

ಮೂಲ : ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ, ಅಕ್ಟೋಬರ್-೨೦೨೪.

೨೦೨೪-೨೫ನೇ ಸಾಲಿಗೆ ವಿಶೇಷ ಪಾಲನಾ ಯೋಜನೆ, ಮುಖ್ಯಮಂತ್ರಿ ಬಾಲಸೇವಾ ಯೋಜನೆ ಮತ್ತು ಉಪಕಾರ ಯೋಜನೆಗಳ ತಾಂತ್ರಿಕ ತೊಂದರೆಗಳಿಂದಾಗಿ ಅಕ್ಟೋಬರ್ ೨೦೨೪ ಮಾಹೆಯಲ್ಲಿ ಬಿಡುಗಡೆಯಾಗಿದ್ದು, ಫಲಾನುಭವಿಗಳಿಗೆ ಅನುದಾನವನ್ನು ಡಿಬಿಟಿ ಮೂಲಕ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ೨೦೨೪-೨೫ ನೇ ಸಾಲಿನ ಪ್ರಯೋಜಕತ್ವ ಕಾರ್ಯಕ್ರಮದ ಅನುದಾನವು ಇದೂವರೆಗೂ ಕೇಂದ್ರ ಸಕಾರದಿಂದ ಬಿಡುಗಡೆಯಾಗಿರುವುದಿಲ್ಲ, ಅನುದಾನ ಬಿಡುಗಡೆಯಾದ ಕೂಡಲೇ, ಫಲಾನುಭವಿಗಳಿಗೆ ಡಿಬಿಟಿ ಮೂಲಕ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ಉಲ್ಲೇಖಗಳು :-

ಪರಾಮರ್ಶನ ಗ್ರಂಥಗಳು

1. Bajpai, A, (2018) The juvenile justice (Care and Protection of children) an analysis, Indian law Review, 2(2), 191-203
2. ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ, ಅಕ್ಟೋಬರ್-೨೦೨೪.
3. ಮಕ್ಕಳ ನ್ಯಾಯಕಾಯ್ದೆ-೨೦೧೫ ತಿದ್ದುಪಡಿ ೨೦೨೧,
4. ಮಕ್ಕಳ ನ್ಯಾಯಕಾಯ್ದೆ ಮಾದರಿ ನಿಯಮಗಳು ೨೦೧೬ ಮತ್ತು ಮಾದರಿ ನಿಯಮಗಳು ತಿದ್ದುಪಡಿ ನಿಯಮಗಳು ೨೦೨೨
5. ಮಿಷನ್ ವಾತ್ಸಲ್ಯ ಅನುಷ್ಠಾನ ಮಾರ್ಗಸೂಚಿಗಳು (೨೦೨೨) ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ
6. www.icps.karnataka.go.in
7. www.kscpcr.kar.nic.in
8. www.childlineindia.org.in
9. http://shodhganga.inflibnet.ac.in
10. http://www.bstrust.org/orphans-and-vulnerable-children